ಔಷಧಿಗಳ ಕೊರತೆಯಿಂದಾಗಿ ಜಾನುವಾರುಗಳಿಗೆ ತೊಂದರೆ

2292 Ë ಶ್ರೀ ಜಿ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಕರ್ನಾಟಕ ರಾಜ್ಯದ ಪ್ರತಿಯೊಂದು ತಾಲ್ಲೂಕಿನಲ್ಲಿಯ ಆಸ್ಪತ್ರೆಗಳಿಗೆ ಔಷಧಗಳ ಕೊರತೆಯಿಂದ ಸರಿಯಾದ ಚಿಕಿತ್ಸೆ ಜಾನುವಾರುಗಳಿಗೆ ಸಿಗುತ್ತಿಲ್ಲದಿರುವ ವಿಷಯ ಸರಕಾರದ ಗಮನಕ್ಕೆ ಬಂದಿದೆಯೇ;*

ಆ) *ಬಂದಿದ್ದಲ್ಲಿ ಇದನ್ನು ಸರಿಪಡಿಸಲು ಕೈಗೊಳ್ಳುವ ಕ್ರಮಗಳೇನು?*

ಇ) *ಪ್ರತಿ ಜಿಲ್ಲೆಗೂ ಹಾಗೂ ಪ್ರತಿಯೊಂದು ಆಸ್ಪತ್ರೆಗಳಿಗೆ ಸರಕಾರದಿಂದ ಬಿಡುಗಡೆ ಮಾಡುತ್ತಿರುವ ಔಷಧಗಳ ಅಂದಾಜು ಎಷ್ಟು; ಇದರ ಅಂದಾಜು ಮೊತ್ತ ಎಷ್ಟಾಗುತ್ತದೆ;*

ಈ) *ಪ್ರತಿಯೊಂದು ತಾಲ್ಲೂಕಿಗೂ ಸರಿ ಸಮಾನವಾದ ಹಂಚಿಕೆಯಾಗುತ್ತಿದೆಯೇ?*

ಉ) *ಹಂಚಿಕೆಯಾಗುತ್ತಿಲ್ಲದಿದ್ದಲ್ಲಿ ಇದನ್ನು ಸರಿಪಡಿಸಲು ಕೈಗೊಳ್ಳುವ ಕ್ರಮಗಳೇನು?*

ಶ್ರೀ ಬಿ.ಎಸ್. ಬಚ್ಚೇಗೌಡ (ಪಶುಸಂಗೋಪನೆ ರಾಜ್ಯ ಸಚಿವರು) :

ಅ) ಬಂದಿಲ್ಲ

ಆ) ಉದ್ಭವಿಸುವುದಿಲ್ಲ

ಇ) ಅಂದಾಜು ಮೊತ್ತದ ವಿವರವನ್ನು ಅನುಬಂಧ-1ರಲ್ಲಿ ನೀಡಿದೆ.

ಈ) ಪ್ರತಿ ತಾಲ್ಲೂಕಿಗೆ ಔಷಧಿಗಳ ಸರಬರಾಜು, ಅಲ್ಲಿರುವ ಜಾನುವಾರು ಸಂಖ್ಯೆಗಳ ಮೇಲೆ ಅವಲಂಬಿಸಿ, ಹಂಚಿಕೆ ಮಾಡಲಾಗುತ್ತಿದೆ.

ಉ) ಔಷಧಿಗಳ ವಿವರಣೆಯನ್ನು ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರಿಗೆ ವಹಿಸಲಾಗಿದ್ದು, ವ್ಯವಸ್ಥಿತ ಔಷಧಿ ವಿತರಣೆಗೆ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ಅನುಬಂಧ-1

ಅ) ಪ್ರತಿಯೊಂದು ಜಿಲ್ಲೆಗೂ ಸರ್ಕಾರದಿಂದ ಬಿಡುಗಡೆ ಮಾಡುತ್ತಿರುವ ಅಂದಾಜು ಮೊತ್ತದ ವಿವರ ಕೆಳಕಂಡಂತಿದೆ:

		(ರೂ. ಲಕ್ಷಗಳಲ್ಲಿ)
1.	ಬೆಂಗಳೂರು ನಗರ	7.28
2.	ಬೆಂಗಳೂರು ಗ್ರಾಮಾಂತರ	16.68
3.	ಕೋಲಾರ	18.04
4.	ತುಮಕೂರು	23.42
5.	ಶಿವಮೊಗ್ಗ	22.00
6.	ಚಿತ್ರದುರ್ಗ	22.00
7.	ಮೈಸೂರು	26.00
8.	ಮಂಡ್ಯ	16.00
9.	ಹಾಸನ	23.10
10.	ದಕ್ಷಿಣ ಕನ್ನಡ	22.00

11.	ಚಿಕ್ಕಮಗಳೂರು	14.90
12.	ಕೊಡಗು	5.82
13.	ಬೆಳಗಾಂ	29.00
14.	ಧಾರವಾಡ	25.00
15.	ಬಿಜಾಪುರ	25.00
16.	ಕಾರವಾರ	12.00
17.	ಗುಲ್ಬರ್ಗಾ	25.00
18.	ಬಳ್ಳಾರಿ	18.00
19.	ಬೀದರ್	11.76
20.	ರಾಯಚೂರು	22.00
	ಒಟ್ಟು	386.00

ಆ) ಪ್ರತಿಯೊಂದು ಆಸ್ಪತ್ರೆಗಳಿಗೆ ಸರ್ಕಾರದಿಂದ ಬಿಡುಗಡೆ ಮಾಡುತ್ತಿರುವ ಅಂದಾಜು ಮೊತ್ತದ ವಿವರ ಕೆಳಕಂಡಂತಿದೆ:

1.	ಪಶು ಆಸ್ಪತ್ರೆ	25,000
2.	ಪಶು ಚಿಕಿತ್ಸಾಲಯ	20,000
3.	ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ	15,000
4.	ಸಂಚಾರಿ ಪಶುಚಿಕಿತ್ಸಾಲಯ	15,000
5.	ಕೃತಕ ಗರ್ಭಧಾರಣಾ ಕೇಂದ್ರ	8,000

ಐ.ಜಿ.ಆರ್.ವೈ ಮತ್ತು ಇಎಎಸ್ ಸ್ಕೀಂಗಳಲ್ಲಿ ಪ್ರತಿಯೊಂದು ತಾಲ್ಲೂಕಿಗೂ ಹಣ ಬಿಡುಗಡೆ

2294 - ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದ ಪ್ರತಿಯೊಂದು ತಾಲ್ಲೂಕಿಗೂ ಜಿ.ಆರ್.ವೈ. ಹಾಗೂ ಐ.ಜಿ.ಆರ್.ವೈ. ಮತ್ತು ಇ.ಎ.ಎಸ್. ಸ್ಕೀಮುಗಳ ಅಡಿಯಲ್ಲಿ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ, (ಅದರ ಸಂಪೂರ್ಣವಾದ ವಿವರಗಳನ್ನು ತಾಲ್ಲೂಕುವಾರು ಕೊಡುವುದು)?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಅ) ಜವಾಹರ್ ರೋಜ್‌ಗಾರ್ ಯೋಜನೆಯ ಮೊದಲನೇ ವಾಹಿನಿಯಡಿಯಲ್ಲಿ ರಾಜ್ಯದ ಎಲ್ಲಾ 20 ಜಿಲ್ಲೆಗಳಿಗೆ ರೂ. 8879.22 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಐ.ಜಿ.ಆರ್.ವೈ. ಯಡಿ ರಾಜ್ಯದ 7 ಜಿಲ್ಲೆಗಳಿಗೆ 1021.25 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಈ ಎರಡು ಯೋಜನೆಗಳಲ್ಲಿ ಜಿಲ್ಲಾವಾರು ಮಾತ್ರ ಬಿಡುಗಡೆ ಮಾಡಲಾಗುತ್ತೆ. ತಾಲ್ಲೂಕುವಾರು ಹಣ ಬಿಡುಗಡೆ ಮಾಡುವುದಿಲ್ಲ. ಜಿಲ್ಲಾವಾರು ಮಾಹಿತಿಯನ್ನು ತಃಖ್ತೆಯಲ್ಲಿ ಲಗತ್ತಿಸಿದೆ.

ಉದ್ಯೋಗ ಭರವಸೆ ಯೋಜನೆಯಡಿಯಲ್ಲಿ ರೂ. 5050.00 ಲಕ್ಷಗಳನ್ನು ತಾಲ್ಲೂಕುವಾರು ಬಿಡುಗಡೆ ಮಾಡಲಾಗಿದೆ. ವಿವರದ ತಃಖ್ತೆ ಲಗತ್ತಿಸಿದೆ.